KARNATAK UNIVERSITY, DHARWAD
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
Examination G.A.D. Section
ಪರೀಕ್ಷಾ ಸಾಮಾನ್ಯ ಆಡಳಿತ ವಿಭಾಗ
"NAAC Accredited with "A" Grade 2022"

Pavate Nagar, Dharwad
ಪಾವಟೆನಗರ, ಧಾರವಾಡ

Fax No. 0837-2741928
Tel Ph No. 0836-2215267
Website : www.kud.ac.in

ನಂ:/ಕವಿವಿ/ಪರೀಕ್ಷಾ/ಜಿಎಡಿ/2022-23/ 1222 ದಿನಾಂಕ: 15/02/2023

**ಸುತ್ತೋಲೆ**

ವಿಷಯ : ಫೆಬ್ರುವರಿ/ಮಾರ್ಚ-2023 ರಲ್ಲಿ ಜರಗುವ ರಾಷ್ಟ್ರೀಯ ಶಿಕ್ಷಣ ನೀತಿ-2020 (NEP) ರ ಅಡಿಯ ಎಲ್ಲ ಸ್ನಾತಕ ಪದವಿಗಳ 1 ಮತ್ತು 3 ನೇ ಸೆಮೆಸ್ಟರ್‌ನ ವಿದ್ಯಾರ್ಥಿಗಳಿಗೆ ಪರೀಕ್ಷಾ ಫಾರ್ಮ/ಶುಲ್ಕ ತುಂಬುವ ಕುರಿತು.

ಉಲ್ಲೇಖ : ನಂ/ಕವಿವಿ/ಪರೀಕ್ಷಾ/ಜಿಎಡಿ/2022-23/1200, ದಿನಾಂಕ:09/02/2023.

****

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ 1 ನ್ನು ಮುಂದುವರೆಸುತ್ತಾ, ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ ಫೆಬ್ರುವರಿ/ಮಾರ್ಚ-2023 ರಲ್ಲಿ ಜರಗುವ ರಾಷ್ಟ್ರೀಯ ಶಿಕ್ಷಣ ನೀತಿ-2020ರ ಅಡಿಯಲ್ಲಿ ಎಲ್ಲ ಸ್ನಾತಕ ಪದವಿಗಳ 1 ಮತ್ತು 3 ನೇ ಸೆಮೆಸ್ಟರ್ ರೆಗ್ಯೂಲರ್/ರಿಪೀಟರ್ಸ್ ವಿದ್ಯಾರ್ಥಿಗಳಿಗೆ ಪರೀಕ್ಷಾ ಫಾರ್ಮ/ಶುಲ್ಕವನ್ನು ತುಂಬಲು ಅಧಿಸೂಚನೆಯನ್ನು ಹೊರಡಿಸಲಾಗಿತ್ತು.

ಸದರ ಅಧಿಸೂಚನೆಯನ್ವಯ 1 ನೇ ಸೆಮಿಸ್ಟರ್ ಅಥವಾ 3 ನೇ ಸೆಮಿಸ್ಟರ್ ವಿದ್ಯಾರ್ಥಿಗಳು ಪರೀಕ್ಷಾ ಫಾರ್ಮ/ಶುಲ್ಕವನ್ನು ತುಂಬುವಾಗ ನಜರಚೂಕಿನಿಂದ 1 ನೇ ಸೆಮಿಸ್ಟರ್‌ನಲ್ಲಿ ಅನುತ್ತೀರ್ಣರಾದಂತಹ ವಿದ್ಯಾರ್ಥಿಗಳು 1 ನೇ ಸೆಮಿಸ್ಟರ್ ಬ್ಯಾಕಲಾಗ್ ಪೇಪರ್ಸ್‌ಗಳಿಗೆ ಪರೀಕ್ಷಾ ಫಾರ್ಮ ತುಂಬಿ 3 ನೇ ಸೆಮಿಸ್ಟರ್ ರೆಗ್ಯೂಲರ್ ಪರೀಕ್ಷಾ ಫಾರ್ಮಗಳನ್ನು ತುಂಬದಿರುವುದು ಹಾಗೂ 3 ನೇ ಸೆಮಿಸ್ಟರ್ ಪರೀಕ್ಷಾ ಫಾರ್ಮ ತುಂಬಿ 1 ನೇ ಸೆಮಿಸ್ಟರ್ ರಿಪೀಟರ್ಸ್ ಪರೀಕ್ಷಾ ಫಾರ್ಮ ತುಂಬದ ವಿದ್ಯಾರ್ಥಿಗಳಿಗೆ ಪರೀಕ್ಷಾ ಫಾರ್ಮ/ಶುಲ್ಕವನ್ನು ಮಹಾವಿದ್ಯಾಲಯಕ್ಕೆ ದಿನಾಂಕ:17/02/2023 ರ ಒಳಗಾಗಿ ಭರಿಸಿಕೊಂಡು SBI Online ಮುಖಾಂತರ ವಿಶ್ವವಿದ್ಯಾಲಯಕ್ಕೆ ಭರಿಸಿ ಅಂತಹ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಯನ್ನು ಸಲ್ಲಿಸುವಾಗ ಪ್ರತಿಯೊಂದು ವಿದ್ಯಾರ್ಥಿಯ UUCMS Registration No, Subject, Subject Code, ಈ ಮಾಹಿತಿಯನ್ನು ಕಡ್ಡಾಯವಾಗಿ ಪರೀಕ್ಷಾ ವಿಭಾಗದ ಸಂಬಂಧಪಟ್ಟ ಅಧೀಕ್ಷಕರುಗಳಿಗೆ **ದಿನಾಂಕ:20/02/2023** ರ ಒಳಗಾಗಿ ಸಲ್ಲಿಸಲು ಹಾಗೂ ಸದರ ಮಾಹಿತಿಯನ್ನು ಸಂಬಂಧಪಟ್ಟ ಸಿಬ್ಬಂದಿಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ತಿಳಿಸಲು ಸೂಚಿಸಲಾಗಿದೆ. ಮುಂದುವರೆದು, ಸದರ ಮಾಹಿತಿಯನ್ನು ಸಲ್ಲಿಸದೆ ಇದ್ದಲ್ಲಿ ಮಹಾವಿದ್ಯಾಲಯದ ಪಾಚಾರ್ಯರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು.

15/2/23
ಕುಲಸಚಿವರು(ಮೌಲ್ಯಮಾಪನ)

ಗೆ,

ಕರ್ನಾಟಕ ವಿಶ್ವವಿದ್ಯಾಲಯ ವ್ಯಾಪ್ತಿಯ ಎಲ್ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳು.